ಶ್ರೀ ಆರ್. ಅನಂತರಾಮನ್.—ನಮ್ಮ ಮೈಸೂರು ಸರ್ಕಾರದ ಸಿಬ್ಬಂದಿಯನ್ನು ಅಲ್ಲಿ ಎಷ್ಟು ವರ್ಷಗಳಿಂದ ಇಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಖಚಿತವಾಗಿ ತಾರೀಖನ್ನು ಹೇಳುವುದಕ್ಕಾಗದೆ ಇದ್ದರೂ ಒಟ್ಟಿನಲ್ಲಿ ಬಹಳ ದಿವಸಗಳಿಂದಲೂ ಇದರಾಗಿದೆಯೆಂದು ಹೇಳಬಹುದು.

ಶ್ರೀ ಆರ್. ಅನಂತರಾಮ್.—ಇವರು ಯಾವಾಗ್ಲೂ ಅಲ್ಲೇ ಖಾಯಂ ಆಗಿ ಒಂದೇ ಸ್ಥಳದಲ್ಲಿ ಇರತಕ್ಕವರಾಗಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಅವರಿಗೂ ವರ್ಗಾವರ್ಗಿಯಿಂಟು.

ಶ್ರೀ ಬಿ. ಹುಚ್ಚೇಗೌಡ.—ಈಗ ಅಲ್ಲಿರತಕ್ಕ ಆ ಬಾಡಿ ಅದೇನು ಸ್ಪ್ಯಾಚುಟರಿ ಬಾಡಿಯೇ, ಅಲ್ಲ ಸಿಬ್ಬಂದಿಯೆಷ್ಟಿದೆ, ಏನು ಎತ್ತ ಎಂಬ ಅಂಶಗಳನ್ನೆಲ್ಲಾ ತಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಹಾಗೆ ಒಂದು ತಪಶೀಲ್ . . . .

Mr. SPEAKER.—These are all details.

Sri Kadidal MANJAPPA.—The matter will be pursued in the light of the suggestions made by the Hon'ble Members.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ತಾವು ಇಟ್ಟಿರತಕ್ಕಂಥ ಸೌಕರ್ಯಗಳು ಎಲ್ಲರಿಗೂ ದೊರೆಯುತ್ತವೆಯೆಂಬ ಬಗ್ಗೆ ತಾವು ಸಾಕಷ್ಟು ಪ್ರಚಾರ ಮಾಡುತ್ತೀರಾ ? ಏತಕ್ಕೆಂದರೆ ನಾನೂ ಸಹ ಅಲ್ಲಿಗೆ ಅನೇಕಸಲ ಹೋಗಿದ್ದೆ. ಆದರೆ ಅಲ್ಲಿ ಆ ರೀತಿ ಅನುಕೂಲಗಳೇನೂ ದೊರೆಯುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಮೈಸೂರಿನವರಿಗೆ ಉಳಿದುಕೊಳ್ಳಲು ಪ್ರತ್ಯೇಕ ಸ್ಥಳವಿದೆ. ಇತರ ಸೌಕರ್ಯಗಳ ಅವಕಾಶವನ್ನು ಸಹ ಅಲ್ಲಿ ಏರ್ಪಡಿಸಿದೆ.

Sri M. PALANIYAPPAN.—Have the Mysore Government given any grants to Tirupathi Temple ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾಗಲೇ ತಿಳಿಸಿದ್ದೆ. ಅಲ್ಲ ನಡೆಯತಕ್ಕ ಸೇವಾರ್ಥ ಮತ್ತು ಶಿಬ್ಬಂದಿ ಇತ್ಯಾದಿಗಳೆಲ್ಲದರ ಖರ್ಚಿನ ಬಗ್ಗೆ ನಾವು 65-68 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ.

Mr. SPEAKER.—It has been answered.

Sri M. PALANIYAPPAN.—I want to know if this sum Rs. 68,000 is intended for Devasthanam or for both Devasthanam and Choultry ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಒಟ್ಟಿಗೆ ಸೇರಿ ಕೊಂಡು 68 ಸಾವಿರ ರೂಪಾಯಿಗಳು ಖರ್ಚಾಗುತ್ತಾ ಇದೆಯೆಂದು ನನಗೆ ತಿಳಿದುಬಂದಿದೆ.

Co-operative Societies (Grants and Loans).

Q.—11. Sri T. C. BASAPPA (Tarikere Constituency).—

Will the Government be pleased to state :—

(*a*) what was the amount provided in the Budget for grant and loan to Co-operative Societies for the last three years, that is, 1952-53, 1953-54, and 1954-55 (figures for grants and loans to be given separately for each year) ;

(*b*) what is the sanctioned amount, grant and loan—

(i) applied for by the Societies ;
(ii) recommended by the Registrar ;
(iii) sanctioned by the Government ;

(information for the last 3 years 1952-53, 1953-54 and 1954-55 up to end of December 1954 to be given for each year) ;

(*c*) what are the names of Societies for which grants and loans have been sanctioned during 1954-55 with the amount so sanctioned ?

A.—Dr. R. NAGAN GOWDA (Minister for Agriculture).—

(*a*)

1952-53—

Loans Rs. 7 lakhs inclusive of Rs. 2 lakhs to Land Mortgage Bank.

Grants Rs. 1 lakh.

1953-54—

Rs. 15 lakhs inclusive of Rs. 10 lakhs to Land Mortgage Bank.

Rs. 1 lakh.

1954-55—

Rs. 12 lakhs inclusive of Rs. 5 lakhs to Land Mortgage Bank.

Rs. 1,10,000.

(*b*)

		1952-53 Rs.
(i) Loans	...	20,22,000
Grants	...	1,48,000
(ii) Loans	...	5,00,000
Grants	...	1,18,120
(iii) Loans	...	5,00,000
Grants	...	1,18,120 (after re-appropriation).

		1953-54 Rs.
(i) Loans	...	22,97,000
Grants	...	1,90,000

		Rs.			Rs.
(ii) Loans	...	3,90,000	Grants	...	3,01,550
Grants	...	94,000	(ii) Loans	...	3,36,500
(iii) Loans	...	3,90,000 (Rs. 10 lakhs to Land Mort gage Bank)	Grants	...	95,150
			(iii) Loans	...	4,00,000 (Rs. 5 lakhs to Land Mort-gage Bank). (Rs. 71,680 to Bellary District).
Grants	...	94,000			
		1954-55			
		Rs.			
(i) Loans	...	25,32,000	Grants	...	41,650

(*c*) Please see list appended below.

List of Co-operative Societies showing the amounts granted and loans advanced by Government during 1954-55.

Grants.

	Rs.
(1) Sri Laxmi Devi Adikarnataka Co-operative Society, Limited, Nerale.	5,000

Loans.

(1) The Hassan House Building Co-operative Society, Limited, Hassan.	25,000
(2) The Davangere House Building Co operative Society, Limited ...	25,000
(3) The Chikmagalur House Building Co-operative Society, Limited	25,000
(4) The Bangalore City Housing Co-operative Society ...	50 000
(5) The Jayanagar House Building Co-operative Society ...	23,500
(6) The Sindhi House Building Co-operative Society ...	40,000
(7) The Maddur Town Co-operative Society	6,000
(8) Nagamangala Taluk Multi-purpose Co-operative Society ...	5,000
(9) Medical College Co-operative Society	1,000
(10) Jog Co-operative Bank	1,000
(11) District Marketing Co-operative Society, Hassan ...	15,000
(12) Tarikere General Stores	5,000
(13) Somavamsa Sahasrarjuna Kshatriya Co-operative Society ...	25,000
(14) Kunigal Taluk Multi-purpose Co-operative Society ...	15,000
(15) Arsikere Cotton Marketing Co-operative Society ...	25,000
(16) Basavangudi Co-operative Society	25,000
(17) Nrale Laxmidevi Adikarnataka Co-operative Society ...	13,500
(18) The Mysore Provincial Co-operative House Building Corporation.	75,000
(19) Parvathinaga House Building Co-operative Society ...	50,180
(20) Patel Nagar House Building Co-operative Society ...	10,200
(21) Hospet House Building Co operative Society	600
(22) Harpanahalli House Building Co-operative Society ...	10,700

ಶ್ರೀ ಟಿ. ಸಿ. ಬನಪ್ಪ.—ತಾವು (ಬ) ಭಾಗದ (2)ಕ್ಕೆ ಒದಗಿಸಿರತಕ್ಕ ಮೊಬಲಗನ್ನು ಮಂಜೂರು ಮಾಡಲು ಸರ್ಕಾರಕ್ಕೆ ರಿಜಿಸ್ಟ್ರಾರ್ ಅವರು ಶಿಫಾರ್ಸುಮಾಡಿದ್ದು ಯಾವಾಗ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಟಿ. ಸಿ. ಬನಪ್ಪ.—ಅವರ ಶಿಫಾರ್ಸುಗಳು ಸರ್ಕಾರಕ್ಕೆ ಮುಂಚಿತವಾಗಿ ಬಂದಿದ್ದಾಗ್ಗೂ ಹಣವನ್ನು ಸರ್ಕಾರ ಮಂಜೂರ್ ಮಾಡುವುದರ ಬಗ್ಗೆ ಬಹಳ ನಿಧಾನ ಮಾಡಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹಾಗೇನೂ ನಿಧಾನವಾಗಿರುವಂತೆ ಕಂಡುಬರುವುದಿಲ್ಲ.

ಶ್ರೀ ಟಿ. ಸಿ. ಬನಪ್ಪ.—ತಮಗೆ ಆ ರಿಜಿಸ್ಟ್ರಾರ್ ಅವರು ಈ ಗ್ರಾಂಟ್‌ಗಳ ಬಗ್ಗೆ 94 ಸಾಪೆರಕ್ಕೆ ಶಿಫಾರ್ಸುಮಾಡಿದ್ದಾಗ್ಗೂ ಸರ್ಕಾರ ಕೇವಲ 41

(ಶ್ರೀ ಟಿ. ಸಿ. ಬಸಪ್ಪ.)

ಸಾವಿರದ 650 ರೂಪಾಯಿಗಳನ್ನು ಮಾತ್ರ ಮಂಜೂರು ಮಾಡಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ಹೆಚ್ಚಿಗೆ ಕೊಡುತ್ತಾ ಬಂದಿದ್ದೇವೆ; ಅದು ತಮಗೇ ಕಾಣುತ್ತಿದೆ. ಈಗ ಕೊಟ್ಟಿರತಕ್ಕದ್ದೆಲ್ಲಾ 50 ಸಾವಿರಕ್ಕೆ ಬರುತ್ತದೆ. ಇನ್ನೂ ಹೆಚ್ಚಿಗೆ ಕೊಡಲು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಈ ವರ್ಷ ತಾವು ಮಂಜೂರು ಮಾಡಿರತಕ್ಕ ಗ್ರಾಂಟ್ ಬಹಳ ಕಮ್ಮಿಯಾಗಿರುವುದರಿಂದ ಡಿಮ್ಯಾಂಡ್ ಬರುತ್ತಿರುವುದು ಬಹಳ ಜಾಸ್ತಿಯಾಗಿ ಕಾಣುತ್ತಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—1952-53ರಲ್ಲಿ ಒಂದು ಲಕ್ಷ ರೂಪಾಯಿಗಳ ಗ್ರಾಂಟ್ ಕೊಟ್ಟಿದ್ದೇವೆ, 1953-54ರಲ್ಲಿ ಮತ್ತೆ ಒಂದು ಲಕ್ಷ ಕೊಟ್ಟಿದ್ದೇವೆ. 1954-55ರಲ್ಲಿ ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ ವರ್ಷೇ ವರ್ಷೇ ಗ್ರಾಂಟ್ ಕೊಡುವುದು ಜಾಸ್ತಿಯಾಗುತ್ತಿದೆ.

ಶ್ರೀ ಟಿ. ಸಿ. ಬಸಪ್ಪ.—ಗ್ರಾಂಟ್ ಕೊಡುತ್ತಿರುವುದು ಕಡಮೆಯಾಗುತ್ತಿದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ಇಲ್ಲ. ಹೋದ ವರ್ಷ 94 ಸಾವಿರ ಕೊಡಲಾಗಿತ್ತು. ಈ ವರ್ಷ 1 ಲಕ್ಷ 10 ಸಾವಿರ ಕೊಟ್ಟಿದೆ. ತಾವು ಪರಿಶೀಲನೆ ಮಾಡಿ ನೋಡಿ. ಯಾವುದೂ ಬಾಕಿ ಉಳಿದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ತಾವು (ಬ) ಭಾಗದ ಪ್ರಶ್ನೆಗೆ ಉತ್ತರವಾಗಿ 1954-55ನೆಯ ಸಾಲಿಗೆ 41,650 ರೂಪಾಯಿಗಳನ್ನು ತೋರಿಸಿದ್ದು ಪರಿಶಿಷ್ಟದಲ್ಲಿ ಕೇವಲ 5,000 ರೂಪಾಯಿಗಳನ್ನು ಮಾತ್ರ ತೋರಿಸಲಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಅದು ಹಾಗಲ್ಲ. ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಸೆಂಟ್ರಲ್ ಬ್ಯಾಂಕುಗಳಿಗೆ ಅಂದರೆ—ಶಿವಮೊಗ್ಗ, ಹಾಸನ ಮತ್ತು ಮಂಡ್ಯ ಈ ಮೂರು ಸ್ಥಳಗಳಿಗೆ ಕೊಟ್ಟಿದ್ದೇವೆ. ಮತ್ತು ಇನ್ನೂ 3,900 ರೂಪಾಯಿಗಳನ್ನು ತಾಲ್ಲೂಕು ಮಲ್ಟಿ ಪರ್ಪಸಸ್ ಕೋ-ಆಪರೇಟೀವ್ ಸೊಸೈಟಿಗಳ ಸೆಕ್ರೆಟರಿಗ ವರಿಗೆ ಕೊಡಲಾಗಿದೆ. ಎಫೆಕ್ಟ್ ಬ್ಯಾಂಕ್ ಸೂಪರ್‌ವಿಷ್ ಪೆಚ್ಚಿದ ಬಗೆ 4,000 ರೂಪಾಯಿಗಳನ್ನು ಎರವು ಕೊಡಲಾಗಿದೆ. ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕುಗಳಿಗೆ 12 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಹೀಗೆಲ್ಲಾ ಒಟ್ಟು ಕೊಟ್ಟಿರತಕ್ಕದ್ದು 49 ಸಾವಿರ ರೂಪಾಯಿಗಳಾಗುತ್ತದೆ.

ಶ್ರೀ ಟಿ. ಸಿ. ಬಸಪ್ಪ.—ಸ್ವಾಮಿ, ತಾವು ಕೊಟ್ಟಿರತಕ್ಕ ಪರಿಶಿಷ್ಟವನ್ನು ನೋಡಿದರೆ ಹಾಗೆ ತಾವು ಒದಗಿಸಿರುವ ಮೊಬಲಗಿನಲ್ಲಿ ಅರ್ಧಕ್ಕಿಂತಲೂ ಮೇಲಾಗಿ ಆ ಮೊಬಲಗೆಲ್ಲವೂ ಬೆಂಗಳೂರಿನಲ್ಲೇ ವಿಲೇವಾರಿಯಾಗಿದೆ ಅನುವುದ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಬೆಂಗಳೂರಿಗೆಲ್ಲಾ ಕೊಟ್ಟಿರುವುದು 13 ಲಕ್ಷ ಚಿಲ್ಲರೆ ಮಾತ್ರ. ಇಲ್ಲಿ ತಾವು ಅದನ್ನು ನೋಡಬಹುದು. ಐಟಂ ನಂಬರ್ಸ್ 4, 5, 6 ಮತ್ತು 16 ಇವುಗಳನ್ನು ನೋಡಿರಿ.

ಶ್ರೀ ಟಿ. ಸಿ. ಬಸಪ್ಪ.—ಈ ನಂಬರ್ಸ್ 16, 13 ಮತ್ತು 19 ಮತ್ತು 20ರಲ್ಲಿ ತೋರಿಸಿರುವ ಮೊಬಲಗೆಲ್ಲಾ ಬೆಂಗಳೂರಿಗೇ ಸೇರಿಲ್ಲವೇ ?

ಡಾ॥ ಆರ್. ನಾಗನಗೌಡ.—19ರಲ್ಲಿ ತಿಳಿಸಿರುವುದು ಬೆಂಗಳೂರಲ್ಲಿಲ್ಲ. ಅದು ಬಳ್ಳಾರಿಯಲ್ಲಿದೆ. ಕೊನೆಯ 4 ಐಟಂಗಳು ಬಳ್ಳಾರಿ ಜಿಲ್ಲೆಗೆ ಸೇರಿರುತ್ತವೆ.

ಶ್ರೀ ಟಿ. ಸಿ. ಬಸಪ್ಪ.—ಅಂತೂ ಒಟ್ಟಿನಲ್ಲಿ ಬೆಂಗಳೂರಿಗೇ ಹೆಚ್ಚು ಭಾಗ ಸೇರಿರುತ್ತೆಂಬುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಆದರೆ ಇದು ಬಹಳ ದೊಡ್ಡೂರು. ಮುಖ್ಯವಾಗಿ ಇಲ್ಲಿ ಡಿಮ್ಯಾಂಡ್ ಜಾಸ್ತಿಯಾಗಿದೆ. ಆದ್ದರಿಂದ ಸ್ವಲ್ಪ ಜಾಸ್ತಿಯಾಗಿರಬಹುದು.

ಶ್ರೀ ಟಿ. ಸಿ. ಬಸಪ್ಪ.—ಅಂದರೆ ಈ ಬೆಂಗಳೂರು ಅಕ್ಕಪಕ್ಕದ ಪ್ರದೇಶಗಳವರು ಬೆಂಗಳೂರಿಗೆ ಹತ್ತಿರವಿರುವ ಕಾರಣ ಇಲ್ಲಿಗೆ ಅವರು ಬೇಗ ಬಂದು ತಮ್ಮಲ್ಲಿ ಒತ್ತಾಯಗಳನ್ನು ಹಾಕುತ್ತಿರುವುದರಿಂದ ಅವರಿಗೆಲ್ಲಾ ಜಾಸ್ತಿ ಮೊಬಲಗು ಬೇಗ ಬೇಗ ದೊರೆಯಲು ಅನುಕೂಲವಾಗಿರುತ್ತದೆಂದು ಭಾವಿಸಬಹುದಲ್ಲವೇ ?

ಡಾ॥ ಆರ್. ನಾಗನಗೌಡ.—ಆ ತರಹ ಡಿಸ್ಕ್ರಿಮಿನೇಷ್ ಏನೂ ಮಾಡುವುದಿಲ್ಲ.

12-30 P.M.

ಶ್ರೀ ಟಿ. ಸಿ. ಬಸಪ್ಪ.—ಇನ್ನು ಮುಂದಾದರೂ ಹೊರಗಡೆಯ ಸಂಘಗಳಿಗೆ ಹೆಚ್ಚು ಸಹಾಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ನಿಮ್ಮ ಸಲಹೆಯನ್ನು ಗಮನದಲ್ಲಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕಿಗೆ ಕೊಡುವ ಗ್ರಾಂಟನ್ನು ಹೆಚ್ಚಿಸುವುದಕ್ಕಾಗುತ್ತದೆಯೆ ?

ಡಾ॥ ಆರ್. ನಾಗನಗೌಡ.—ಗ್ರಾಂಟ್ ಅಲ್ಲ, ಲೋನ್; ಈಗಾಗಲೇ ಅವರು ಡಿಬೆಂಚರುಗಳನ್ನೆತ್ತಿದ್ದಾರೆ, ನಾವು ಗ್ಯಾರಂಟಿ ಕೊಟ್ಟಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಗ್ರಾಮಾಂತರಗಳಲ್ಲಿ ರೈತರು ಬ್ಯಾಂಕುಗಳಲ್ಲಿ ಮಾಡಿಕೊಂಡಿರುವ ಸಾಲವನ್ನು ಲ್ಯಾಂಡ್ ಮಾರ್ಟ್‌ಗೇಜು ಬ್ಯಾಂಕಿನಿಂದ ಅವರಿಗೆ ಸಾಲ ಕೊಟ್ಟು ತೀರಿಸುವುದಕ್ಕವಕಾಶವಿಲ್ಲವೆ ?

ಡಾ॥ ಆರ್. ನಾಗನಗೌಡ.—ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕಿನವರು 30 ಲಕ್ಷ ರೂಪಾಯಿ ಡಿಬೆಂಚರುಗಳನ್ನೆತ್ತಿದ್ದಾರೆ, ಇದಕ್ಕೆ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ. ಸರ್ಕಾರದವರೇ ಸಾಲ ಕೊಡುವ ಅವಶ್ಯಕವಿಲ್ಲ. ಅವರು ಡಿಬೆಂಚರು ಎತ್ತಿ ಕೊಡಬೇಕು.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಸರ್ಕಾರಕ್ಕೆ ರೈತರ ಸಾಲದ ಹೊರೆಯನ್ನು ಕಡಮೆಮಾಡುವ ಉದ್ದೇಶವಿಲ್ಲವೆ ?

ಡಾ॥ ಆರ್. ನಾಗನಗೌಡ.—ಅವರು ಡಿಬೆಂಚರು ಎತ್ತಲು ನಾವು ಸಹಾಯ ಮಾಡುತ್ತೇವೆ.

ಶ್ರೀ ಯು. ಎಂ ಮಾದಪ್ಪ.—ಕಳೆದ ವರ್ಷ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಎಷ್ಟು ಸಾಲ ಕೇಳಿದ್ದರು ?

ಡಾ॥ ಆರ್. ನಾಗನಗೌಡ.—ಕಳೆದ ವರ್ಷ ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದೆವು. ಅಲ್ಲದೆ ಅವರು ಡಿಬೆಂಚರುಗಳನ್ನೆತ್ತಲು ಪ್ರಯತ್ನ ಮಾಡಿದರು, ಅದು ಯಶಸ್ವಿಯಾಗಲಿಲ್ಲ, ಈ ವರ್ಷ ಯಶಸ್ವಿಯಾಗಿದೆ. ಹೀಗೆ ಡಿಬೆಂಚರುಗಳ ಮೇಲೆ ಸಾಲ ಎತ್ತುವುದು ಒಳ್ಳೆಯದು.

ಶ್ರೀ ಪಿ. ಆರ್ ರಾಮಯ್ಯ.—ಸಹಕಾರ ಸಂಘಗಳಿಗೆ ಸಾಲ ಅಥವಾ ಗ್ರಾಂಟು ಕೊಡಬೇಕಾದರೆ ಏನು ನಿಬಂಧನೆಗಳನ್ನಿಟ್ಟುಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಮುಖ್ಯವಾಗಿ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರು, ಗ್ರಾಂಟುಗಳ ವಿಚಾರದಲ್ಲಿ, ಅವಶ್ಯಕವೆ, ಸಹಾಯ ಮಾಡಬೇಕೆ ಎಂಬುದನ್ನು ವಿಚಾರಮಾಡಿ ಶಿಫಾರಸು ಮಾಡುತ್ತಾರೆ. ಸರ್ಕಾರದಿಂದ ಹತ್ತು ಹನ್ನೆರಡು ಲಕ್ಷ ರೂಪಾಯಿ

ಸಾಲ ಕೊಡುವುದೇನೂ ಹೆಚ್ಚಲ್ಲ. ಇದರಲ್ಲಿ medium, short and long loans other than land mortgage bank loans ಕೊಡಲು ನಾವು ಪ್ರಯತ್ನ ಮಾಡುತ್ತೀದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಸಾಲವನ್ನು ಅಥವಾ ಗ್ಯಾರಂಟಿನ್ನು ಒಂದೊಂದು ಪ್ರದೇಶದ ಆಧಾರದಮೇಲೆ, ಎಂದರೆ regional basis ಮೇಲೆ ಕೊಡಬೇಕೆಂದು ನಿಗದಿ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಹಾಗೇನೂ ರೀಜನಲ್ ಎಂದು ಮಾಡಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರಿನಲ್ಲಿ ಜನ ಸಂಖ್ಯೆ 9 ಲಕ್ಷಕ್ಕಿಂತ ಹೆಚ್ಚಾಗಿದ್ದು ಮನೆಗಳನ್ನು ಕಟ್ಟುವ ಅವಶ್ಯಕತೆ ಬಹಳವಾಗಿಲ್ಲವೆ ?

ಡಾ॥ ಆರ್. ನಾಗನಗೌಡ.—ಈಗ 12 ಲಕ್ಷ ರೂಪಾಯಿಗಳಲ್ಲಿ 5 ಲಕ್ಷ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋದರೆ 7 ಲಕ್ಷ ರೂಪಾಯಿ ಉಳಿಯಿತು. ಈಗಾಗಲೇ ಒಬ್ಬ ಮಾನ್ಯ ಸದಸ್ಯರು ಹೇಳಿದಹಾಗೆ ಇಲ್ಲಿಗೆ ಒಂದು ಲಕ್ಷದಮೇಲೆ ಕೊಟ್ಟಿದ್ದೇವೆ. ಬೆಂಗಳೂರು ನಗರ ಒಂದು ಜಿಲ್ಲೆಯೆಂದು ಭಾವಿಸಿ ಮಿಕ್ಕ ಕಡೆಗೆ 70-80 ಸಾವಿರವಾದರೆ ಬೆಂಗಳೂರಿಗೆ ಹೆಚ್ಚು ಪ್ರಮಾಣ ಕೊಟ್ಟಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರಿನಲ್ಲಿ ಸಾಲ ಅಥವಾ ಗ್ಯಾರಂಟು ಕೊಡಬೇಕಾದರೆ ಸಂಘಗಳು ಸರಿಯಾಗಿ ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದರೆ ತಾನೆ ?

ಡಾ॥ ಆರ್. ನಾಗನಗೌಡ.—ಇಲ್ಲಿಯೂ ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ, ಇತರ ಕಡೆಗಳಲ್ಲಿಯೂ ಮಾಡುತ್ತಿವೆ.

ಶ್ರೀ ಜಿ. ಶಿವಪ್ಪ.—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಡಿಬೆಂಚರುಗಳನ್ನೆತ್ತಿದ್ದಾರೆಂದು ಹೇಳಿದಿರಿ. May I know at what rate of interest debentures have been issued ?

Dr. R. NAGAN GOWDA.—I cannot definitely say, Sir. I think it is 4½ per cent.

Sri G. SIVAPPA.—May I bring to the notice of the Government that this rate of interest of 4½ per cent is very high and therefore is it not a fact that the Taluk Land Mortgage Banks are charging a high rate of interest, *i.e.*, 7½ per cent ?

Dr. R. NAGAN GOWDA.—If the Hon'ble Member suggests that the rate of interest to the ultimate borrower should be reduced, that matter will be considered.

ಶ್ರೀ ಜಿ. ಶಿವಪ್ಪ.—ಹೆಚ್ಚು ಸಾಲವನ್ನೆತ್ತುವುದರ ಜೊತೆಗೆ ಸರ್ಕಾರದವರೂ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೆಚ್ಚು ಹಣವನ್ನು ಕೊಡುವುದು ಅವರ ಕರ್ತವ್ಯವಲ್ಲವೇ ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ಡಿಬೆಂಚರುಗಳನ್ನೆತ್ತಿ ಅವರು ಕೆಲಸ ಮಾಡಬೇಕು, ಅದಕ್ಕೆ ಸಹಾಯ ಸರ್ಕಾರ ಮಾಡುತ್ತಾರೆ. ಇದಕ್ಕಿಂತ ಹೆಚ್ಚಿನ ಸಹಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ತಾವ್ಮಾಗೆ ಸರ್ಕಾರದವರು ಕೊಟ್ಟಿರುವ ಹಣದಲ್ಲಿ ಸಾಲ ಕೊಟ್ಟಿದ್ದಾರೋ ಅಥವಾ ಡಿಬೆಂಚರು ಹಣದಲ್ಲಿ ಕೊಟ್ಟಿದ್ದಾರೋ ?

ಡಾ॥ ಆರ್. ನಾಗನಗೌಡ.—ಅವರಿಗೆ ನಾವು ಏನೂ ಹಣ ಕೊಡುವುದಕ್ಕಾಗುವುದಿಲ್ಲ. ಅವರು ಡಿಬೆಂಚರ್ ಎತ್ತಿದ್ದರೆ ಅದಕ್ಕೆ ಸಹಾಯವಾಗಿ ಸರ್ಕಾರ ಗ್ಯಾರಂಟಿ ಕೊಡುತ್ತಾರೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—15 ಲಕ್ಷ ರೂಪಾಯಿ ಸಾಲ ಕೊಟ್ಟಿರುವವರು ನಿಮ್ಮು. ಅವರು ಈ ಹಣವನ್ನು ಸಾಲಕ್ಕೆ ಹಂಚುತ್ತಾರೆಯೋ ಅಥವಾ ಅವರು ಡಿಬೆಂಚರುಗಳಿಂದ ಪಡೆದ ಹಣದಲ್ಲಿ ಹಂಚುತ್ತಾರೆಯೋ ?

ಡಾ॥ ಆರ್. ನಾಗನಗೌಡ.—ಅವರು ಡಿಬೆಂಚರುಗಳಿಂದ ಪಡೆದ ಹಣವನ್ನು ಹಂಚುತ್ತಾರೆ.

ಶ್ರೀ ಎಸ್. ಸಿದ್ದಪ್ಪ.—ಮೈಸೂರು ಸರ್ಕಾರದವರ ಗ್ಯಾರಂಟಿಯಮೇಲೆ ಮೈಸೂರು ಬ್ಯಾಂಕಿನಿಂದ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಎಷ್ಟು ಹಣವನ್ನು ಸಾಲ ಕೊಡಿಸಿದ್ದಾರೆ ?

Sri G. SIVAPPA.—He is not in his place, Sir.

Mr. SPEAKER.—Yes. He cannot put his question, because he is not in his place.

Sri Ijari SIRASAPPA.—May I know the state of recoveries of the loans advanced hitherto ?

Dr. R. NAGAN GOWDA.—So far as the Land Mortgage Bank Loans are concerned, the recovery is good.

ಶ್ರೀ ಸೋಲೂರು ಸಿದ್ದಪ್ಪ.—ಮೈಸೂರು ಸರ್ಕಾರದ ಜವಾಬ್ದಾರಿಯ ಮೇಲೆ ಮೈಸೂರು ಬ್ಯಾಂಕಿನಿಂದ ಎಷ್ಟು ಸಾಲವನ್ನು ಕೊಡಿಸಿದ್ದಾರೆ ?

Dr. R. NAGAN GOWDA.—I have no information about that. ಮೈಸೂರು ಬ್ಯಾಂಕಿನಿಂದ ಎಷ್ಟು ಸಾಲ ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಹೆಚ್ಚು ರೈತರಿಗೆ ಸಾಲ ಕೊಡಬೇಕೆಂಬುದು ಸರ್ಕಾರದ ಉದ್ದೇಶವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಪಟ್ಟಣದಲ್ಲಿ ರೈತರು ಹೆಚ್ಚು ವಾಸಮಾಡುತ್ತಿಲ್ಲ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಸುತ್ತಮುತ್ತಿನ ಪ್ರದೇಶಗಳಲ್ಲಿ ತೋಟಗಳು ಮತ್ತು ತರಕಾರಿ ತೋಟಗಳನ್ನಿಟ್ಟುಕೊಂಡಿದ್ದಾರೆ, ಆದುದರಿಂದ ಅವರೂ ರೈತರು.

Government Electric Department. (Agreement rejected by the workmen)

Q.—105. **Sri D. VENKATESH** (Gandhinagar Constituency).—

Will the Government be pleased to state :—

the details of the final agreement that was finalised before the Chief